**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: 13ನೇ ಹಣಕಾಸು ಯೋಜನೆಯಡಿ ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕಿನ ಕಡಬ ಮತ್ತು ಇತರೆ 10 ಗ್ರಾಮಗಳು ಹಾಗೂ ನಿಟ್ಟೂರು ಮತ್ತು ಇತರೆ 2 ಗ್ರಾಮಗಳ ಕುಡಿಯುವ ನೀರು ಸರಬರಾಜು ಯೋಜನೆ ಕಾಮಗಾರಿಯನ್ನು 3ನೇಯ ವ್ಯಕ್ತಿ / ಸಂಸ್ಥೆ ತಪಾಸಣೆ ಮಾಡಲು ತಂಡ ರಚಿಸುವ ಕುರಿತು.

ಓದಲಾಗಿದೆ:

1. ದಿನಾಂಕ:19.07.2017ರಂದು ನಡೆದ SLSSC ಸಭೆಯ ನಡವಳಿಗಳು.
2. ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ರವರ ಕಡತ ಸಂ:ಗ್ರಾಅಪ 1237 ಗ್ರಾಕುನೀ&ನೈಇ 2015

---

**ಪೀಠಿಕೆ:**

13ನೇ ಹಣಕಾಸು ಯೋಜನೆಯಡಿ ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕಿನ ಕಡಬ ಮತ್ತು ಇತರೆ 10 ಗ್ರಾಮಗಳು ಹಾಗೂ ನಿಟ್ಟೂರು ಮತ್ತು ಇತರೆ 2 ಗ್ರಾಮಗಳ ಕುಡಿಯುವ ನೀರು ಸರಬರಾಜು ಯೋಜನೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವ ಯೋಜನೆ ಕಾಮಗಾರಿಯ ಟೆಂಡರ್ ಐಟಂಗಳ ಪರಿಮಾಣಗಳಿಗಿಂತ ಹೆಚ್ಚುವರಿಯಾಗಿ ಅನುಷ್ಠಾನಗೊಳಿಸಲಾಗಿರುವುದು ಹಾಗೂ ಟೆಂಡರ್‌ನಲ್ಲಿ ಇಲ್ಲದಿರುವ ಹೊಸ ಐಟಂಗಳನ್ನು ಹೆಚ್ಚುವರಿಯಾಗಿ (Variation due to tendered items & due to new items) ತೆಗೆದುಕೊಂಡಿರುವುದರಿಂದ ಯೋಜನೆಯ ಒಟ್ಟು ಅಂದಾಜಿನಲ್ಲಿ ಹೆಚ್ಚಳವಾಗಿದ್ದು, ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆರವರು ಈ 2 ಯೋಜನೆಗಳ ಕಾಮಗಾರಿ ಅನುಷ್ಠಾನ ಕುರಿತಂತೆ 3rd Partyಯಿಂದ ತಪಾಸಣೆಗೊಳಪಡಿಸಲು ಪ್ರಸ್ತಾವನೆ ಸಲ್ಲಿಸಿದ್ದಾರೆ. ಈ ಕಾರಣಗಳಿಂದ ಉದ್ದೇಶಿತ ಯೋಜನೆಗಳ ಕಾಮಗಾರಿಯನ್ನು 3ನೇಯ ವ್ಯಕ್ತಿ / ಸಂಸ್ಥೆಯಿಂದ ತಪಾಸಣೆ ಮಾಡಿಸಲು ತಂಡ ರಚಿಸಲು ತೀರ್ಮಾನ ಕೈಗೊಳ್ಳಲಾಗಿದೆ. ದಿನಾಂಕ:19.07.2017ರ SLSSC ಸಭೆಯ ನಿರ್ಣಯದನ್ವಯ ನಿಗದಿಪಡಿಸಿರುವ ಭತ್ಯೆಗಳನ್ನು ನೀಡಬಹುದಾಗಿದೆ. ಆದ್ದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 23 ಗ್ರಾನೀಸ(5) 2018 ಬೆಂಗಳೂರು, ದಿನಾಂಕ:04.04.2018.**

ಪೀಠಿಕೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, 13ನೇ ಹಣಕಾಸು ಯೋಜನೆಯಡಿ ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕಿನ ಕಡಬ ಮತ್ತು ಇತರೆ 10 ಗ್ರಾಮಗಳು ಹಾಗೂ ನಿಟ್ಟೂರು ಮತ್ತು ಇತರೆ 2 ಗ್ರಾಮಗಳ ಕುಡಿಯುವ ನೀರು ಸರಬರಾಜು ಯೋಜನೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವ ಯೋಜನೆಗಳ ಕಾಮಗಾರಿಯ Tender ಐಟಂಗಳ ವ್ಯತ್ಯಾಸ ಹಾಗೂ ಹೊಸ ಐಟಂಗಳ ಹೆಚ್ಚುವರಿ(Variation) ಕುರಿತು ಪರಿಶೀಲಿಸಲು / ತಪಾಸಣೆ ನಡೆಸಲು ಈ ಕೆಳಕಂಡಂತೆ 3ನೇಯ ವ್ಯಕ್ತಿ / ಸಂಸ್ಥೆಯನ್ನು ರಚಿಸಲು ಆದೇಶ ಹೊರಡಿಸಲಾಗಿದೆ.

| | | |
|---|---|---|
| 1 | ಶ್ರೀ ಸುಕುಮಾರ, ನಿವೃತ್ತ ಹೆಚ್ಚುವರಿ ಮುಖ್ಯ ಇಂಜಿನಿಯರ್, ಬೆಂಗಳೂರು. | ಅಧ್ಯಕ್ಷರು |
| 2 | ಶ್ರೀ ವಿ.ಜೆ. ರಾಯ್ಕರ್, ನಿವೃತ್ತ ಕಾರ್ಯಪಾಲಕ ಅಭಿಯಂತರರು, ಬೆಳಗಾವಿ. | ಸದಸ್ಯರು |
| 3 | ಶ್ರೀ ರಂಗಸ್ವಾಮಿ, ನಿವೃತ್ತ ಕಾರ್ಯಪಾಲಕ ಅಭಿಯಂತರರು, ಮೈಸೂರು. | ಸದಸ್ಯರು |

2. ಸದರಿ ತಪಾಸಣಾ ಕಾರ್ಯಕ್ಕಾಗಿ ಸಮಿತಿಯ ಸದಸ್ಯರುಗಳಿಗೆ ಭತ್ಯೆಗಳನ್ನು ಈ ಕೆಳಗಿನಂತೆ ನೀಡತಕ್ಕದ್ದು.

ಅ) ಪ್ರತಿ ತಪಾಸಣೆ / ಸಭೆಯಲ್ಲಿ ಭಾಗವಹಿಸುವವರಿಗೆ – ರೂ.5000/–
ಆ) ದಿನಭತ್ಯೆ – ರೂ.500/–
ಇ) ಸಂಭವನೀಯ ಭತ್ಯೆ – ರೂ.250/–
ಈ) ತಪಾಸಣೆ ವರದಿ ತಯಾರಿಕೆಗೆ – ರೂ.500/–
ಉ) ಪ್ರಯಾಣ ಭತ್ಯೆ – ಪ್ರವಾಸ ಭತ್ಯೆಗಾಗಿ ಅನುಸರಿಸಲ್ಪಡುವ ನಿಯಮಗಳನ್ವಯ ಪಾವತಿಸುವುದು

3. ಮೇಲ್ಕಂಡ ತಂಡವು ಉದ್ದೇಶಿತ ಯೋಜನೆಗಳ ತಪಾಸಣೆಗೊಳಪಡಿಸಿರುವ ಎಲ್ಲಾ ಕಾಮಗಾರಿಗಳನ್ನು ಭೌತಿಕವಾಗಿ Variation ಬಗ್ಗೆ ಪರಿಶೀಲಿಸಿ, ನಂತರ ಕೈಗೊಂಡ ತಪಾಸಣೆಯ ವಿಸ್ತೃತ ವರದಿಯನ್ನು ದಾಖಲೆಗಳೊಂದಿಗೆ 30 ದಿನಗೊಳಗಾಗಿ CE,RDWSD ರವರ ಮುಖೇನ ಸರ್ಕಾರಕ್ಕೆ ನೀಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಆಯುಕ್ತರು ಹಾಗೂ ಪದನಿಮಿತ್ತ ಸರ್ಕಾರದ ಕಾರ್ಯದರ್ಶಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

**ಪ್ರತಿಗಳು:**

1. ಮಹಾಲೇಖಪಾಲರು (ಲೆಕ್ಕಪತ್ರ –AG/A&E) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಎಯು–I – G&SSA- AUDIT) ಕರ್ನಾಟಕ, ಬೆಂಗಳೂರು.
3. ಮಹಾಲೇಖಪಾಲರು (ಎಯು– II – E&RSA-) ಕರ್ನಾಟಕ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಬೆಂಗಳೂರು.
5. ವಿಶೇಷಾಧಿಕಾರಿಗಳು (ಜಿಪಂ) ಹಾಗೂ ಸರ್ಕಾರದ ಪದನಿಮಿತ್ತ ಉಪಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ ಬೆಂ.
6. ಸರ್ಕಾರದ ಆಧೀನ ಕಾರ್ಯದರ್ಶಿ, ವೆಚ್ಚ (6) (ಜಿಪಂ) ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
7. ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, 2ನೇ ಮಹಡಿ, ಕಾವೇರಿಭವನ, ಬೆಂ.
8. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರುರವರ ಆಪ್ತಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು–
9. ಶ್ರೀ ಸುಕುಮಾರ, ನಿವೃತ್ತ ಹೆಚ್ಚುವರಿ ಮುಖ್ಯ ಇಂಜಿನಿಯರ್, ನಂ.196, 2ನೇ ಮುಖ್ಯ, ಕೆಇಬಿ, ಲೇಔಟ್, ಸಂಜಯ್ ನಗರ, ಬೆಂಗಳೂರು–560094.
10. ಶ್ರೀ ವಿ.ಜೆ. ರಾಯ್ಕರ್, ನಿವೃತ್ತ ಕಾರ್ಯಪಾಲಕ ಅಭಿಯಂತರರು, ಪ್ಲಾಟ್ ನಂ.51, ನೀಲೆ ಕಟ್ಟಡ, ಅಮೃತ ವಿದ್ಯಾಲಯದ ಹತ್ತಿರ, ನಿತ್ಯಾನಂದ ಕಾಲೋನಿ, ಬೆಳಗಾವಿ.
11. ಶ್ರೀ ರಂಗಸ್ವಾಮಿ, ನಿವೃತ್ತ ಕಾರ್ಯಪಾಲಕ ಅಭಿಯಂತರರು, ಡೋರ್ ನಂ.1240, ಮೊದಲನೇ ಕ್ರಾಸ್, ಕೃಷ್ಣಮೂರ್ತಿಪುರಂ, ಮೈಸೂರು–570004.
12. ಅಧ್ಯಕ್ಷರು, ಜಿಲ್ಲಾ ಪಂಚಾಯತ್, **ತುಮಕೂರು.**
13. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, **ತುಮಕೂರು.**
14. ಮುಖ್ಯ ಲೆಕ್ಕಾಧಿಕಾರಿ, ಜಿಲ್ಲಾ ಪಂಚಾಯತ್, ತುಮಕೂರು.
15. ಅಧೀಕ್ಷಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವೃತ್ತ, **ಬೆಂಗಳೂರು.**
16. ಮುಖ್ಯ ಲೆಕ್ಕಾಧಿಕಾರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಕಾವೇರಿ ಭವನ, ಬೆಂಗಳೂರು.
17. ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, **ತುಮಕೂರು.**
18. ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಪ್ರಧಾನ ಕಾರ್ಯದರ್ಶಿ ಇವರ ಆಪ್ತ ಕಾರ್ಯದರ್ಶಿ.
19. ಆಯುಕ್ತರು, ಮತ್ತು ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ / ಆಂತರಿಕ ಆರ್ಥಿಕ ಸಲಹೆಗಾರರು, RDPR ಇಲಾಖೆ ಇವರುಗಳ ಆಪ್ತ ಸಹಾಯಕರು.
20. ಮುಖ್ಯ ಸಂಪಾದಕರು ಮತ್ತು ಸಂಪರ್ಕಾಧಿಕಾರಿ ಕರ್ನಾಟಕ ವಿಕಾಸ ಗ್ರಾಅಪಂ.ರಾಜ್ ಇಲಾಖೆ, ಬೆಂಗಳೂರು.
21. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾಅಪಂ.ರಾಜ್ ಇಲಾಖೆ (ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5 ಪ್ರತಿಗಳು).
22. ರಾಜ್ಯ ಪತ್ರಾಗಾರ ಇಲಾಖೆ (ಬಿಡಿ ಪ್ರತಿ ಶಾಖೆ).
23. ನಿರ್ದೇಶಕರು, ಶ್ರೀ ಅಬ್ದುಲ್ ನಜೀರ್ ಸಾಬ್‌ರವರ ಗ್ರಾಮೀಣಾಭಿವೃದ್ಧಿ ರಾಜ್ಯ ಸಂಸ್ಥೆ, ಲಲಿತ್ ಮಹಲ್ ರಸ್ತೆ, ಮೈಸೂರು.
24. ಗ್ರಾಅಪಂ.ರಾಜ್ ಇಲಾಖೆಯ ಮಾಹಿತಿ ಕೇಂದ್ರ (10 ಪ್ರತಿಗಳು). 25. ಶಾಖಾ ರಕ್ಷಾ ಕಡತ: ಹೆಚ್ಚುವರಿ ಪ್ರತಿಗಳು.